ಅವಳು ಮೌನವಾದಳು. ನೆಲ ನಡುಗುವಂತೆ ಕುಣಿಯುತ್ತಿದ್ದವಳು, ಬಾಯಿ ಹರಿಯುವಂತೆ ಮಾತನಾಡುತ್ತಿದ್ದವಳಿಗೆ ಏನಾಗಿದೆ. ಈಗ ಬಾಯಿ ಹೊಲೆದು ಕುಳಿತುಬಿಟ್ಟಿದ್ದಾಳಲ್ಲ. 'ಸಾಕಮ್ಮ ಸಾಕು ಮಹರಾಯ್ತಿ ನಿಲ್ಲಿಸು ನಗುವನ್ನ' ಎಂದು ಗದರಿಸುವವರೆಗೂ ನಗುತ್ತಲೇ ಉಳಿಯುತ್ತಿದ್ದವಳ, ಉಕ್ಕುವ ಚಿಲುಮೆ ನಿಲ್ಲಿಸಿದವರು ಯಾರು? 'ಒಂದೇ ಒಂದು ನಿಮಿಷ ಸುಮ್ಮನಿರೇ ಸಾಕು' ಎಂದು ಗದರಿಸಿದರೆ 'ಒಂದು ಸೆಕೆಂಡ್ ಬೇಕಾದ್ರೆ ಕಷ್ಟಪಟ್ಟು ನಿನಗೋಸ್ಕರ ಸುಮ್ಮನಿರ್ತೀನಿ' ಅನ್ನುತ್ತಿದ್ದವಳನ್ನು ಹೀಗೆ ಮೌನ ಗೌರಿ ಮಾಡಿದವರು ಯಾರು ? 'ಪ್ರಶ್ನಾ... ಹೇಳಮ್ಮ... ಪ್ಲೀಸ್...' ನನ್ನ ದನಿ ಒಳಗೇ ಆರ್ತವಾಗಿ ಕೂಗತೊಡಗಿತ್ತು.

ನನ್ನನ್ನೇ ಕ್ಷಣಕಾಲ ದಿಟ್ಟಿಸಿದಳು. ನಂತರ 'ನಿನಗೇನೋ ಆಗಿದೆ. ಸಮುದ್ರ ತೀರದಲ್ಲಿ, ಬೆಳದಿಂಗಳ ರಾತ್ರಿಯಲ್ಲಿ ಕುಳಿತುಕೊಂಡರೆ ಕೆಲವರಿಗೆ ಕೆರಳುತ್ತಂತೆ. ಏಳು, ಮೇಲೆ ಹೋಗೋಣ...' ಸೀರೆ ಕೊಡವಿಕೊಂಡು ಎದ್ದು ನಿಂತಳು.

'ಪ್ರಶ್ನಾ... ಕೂತ್ಕೋಮ್ಮ...' ತಡೆದು ಮೆಲ್ಲಗೆ ಕೇಳಿದೆ, 'ನಿನ್ನ ಗಂಡ ನಿನ್ನನ್ನ ಚೆನ್ನಾಗಿ ನೋಡ್ಕೊಳ್ತಿಲ್ವ?' ನುಂಗಿಕೊಂಡಂತೆ ಈ ಪ್ರಶ್ನೆ ಕೇಳಿದೆ.

'ಯಾಕೋ ಪೆದ್ದ... ಹೆಣ್ಣಿನ ಪ್ರತಿಯೊಂದು ಸಣ್ಣ ಬದಲಾವಣೆಗಳಿಗೂ ಗಂಡನನ್ನೇ ಕಾರಣ ಮಾಡೋ ಗುಂಪಿನಲ್ಲಿ ನೀನೂ ಸೇರ್ಕೊಂಡು ಬಿಟ್ಯಾ?...' ಮೃದು, ಮಧುರ ಇಂಚರದ ಧ್ವನಿಯಲ್ಲಿ ಕೇಳಿದಳು. ಅವಳ ಮಾತು ಬಹುತೇಕ ಒಂದು ಸಣ್ಣ ತೂಕ, ಕೊಂಚ ಭಾರ, ಹೆಚ್ಚು ಪಾಸ್‌ಗಳಿಲ್ಲದೇ ಇರುತ್ತದೆ. ಅದು ಸ್ವಾಭಾವಿಕ ರೀತಿಯಲ್ಲೇ ಇರುತ್ತದೆ. ಸ್ವೀಕರಿಸಿದರೆ ಅದು ಸ್ವರಗಳಿಲ್ಲದೆಯೇ ನುಡಿಸುವ ವೀಣೆ ತಂತಿಯಂತೆ. ತಂಬೂರಿ ನಾದವೊಂದು ಅಲೆಅಲೆಯಾಗಿ ತೇಲಿ ಬಂದಂತೆ. ಅಸ್ವೀಕಾರವಾಯಿತೋ... ಶ್ರುತಿ ತಪ್ಪಿದ ಕೋಗಿಲೆಯ ಧ್ವನಿಯಂತೆ. ನಾನು ಎಂದೂ, ಎಂದೆಂದೂ ಅವಳ ಮಾತು, ನಗೆ, ನಡೆ ಎಲ್ಲವನ್ನೂ ಸ್ವೀಕರಿಸಿಕೊಂಡೇ ಇದ್ದವನು. ನನಗೆ ಅಸಹನೆ ಆಗಿದ್ದು ಅವಳ ಮೌನದಿಂದ.

'ನಾನೂ ಕೂಡ ನಿನ್ನ ಫ್ಯಾನ್‌ಗಳಲ್ಲಿ ಒಬ್ಬ ಆಗಿದ್ದೆ ಅಂತ ಮರೀಬೇಡ ಪ್ರಶ್ನಾ!' ಸ್ವಲ್ಪ ಕಹಿ ಮತ್ತು ಗದರಿಕೆ ಬೆರೆತ ಧ್ವನಿಯಲ್ಲಿ ಹೇಳಿದೆ. 'ನಾನು ನಿನಗೆ ತುಂಬಾ ಕ್ಲೋಸ್ ಆಗಿದ್ದು ನಿಜ ತಾನೇ? ಆ ಗೆಳೆತನದ ಹಕ್ಕಿನಿಂದ ಕೇಳುತ್ತಿದ್ದೇನೆ...' ನನ್ನ ಅಧಿಕಾರಕ್ಕೆ ಲಾಜಿಕಲ್ ಬೇಸ್ ತಂದಿಟ್ಟುಕೊಂಡೆ. ಅವಳೊಡನೆ ಹೆಜ್ಜೆ ಹಾಕುತ್ತಾ ಕೆಣಕಿದೆ, 'ಈ ಹೆಣ್ಣು ಮಕ್ಕಳಿಗೆ ಏನಾಗುತ್ತೋ, ಮದುವೆ ಆದದ್ದೇ ತಡ ಪೂರಾ ಪೂರಾ ಬದಲಾಗಿ ಬಿಡುತ್ತಾರೆ. ಅವರಿಗೆ ಮದುವೆಗೆ ಮೊದಲ ಜೀವನವೇ ಒಂದು ಹಳೆ ಜನ್ಮದ ತರಹ ಕಾಣಿಸುತ್ತೇನೋ...' ಹೇಗಾದರೂ ಅವಳು ಬಾಯಿ ಬಿಟ್ಟು ಮಾತನಾಡಿದರೆ ಸಾಕಿತ್ತು ನನಗೆ.

ಆದರೆ ಅವಳು 'ಅವರವರ ಭಾವಕ್ಕೆ ತಕ್ಕಂತೆ...' ಅಂದು ಸುಮ್ಮನಾಗಿಬಿಟ್ಟಳು. ಮತ್ತೆ ಕೆಲ ನಿಮಿಷಗಳ ಕಾಲ ಮೌನದ ನಡಿಗೆ. ಮೂಡಿ ಬರುತ್ತಿದ್ದ ಚಂದಿರ, ಬೆಳದಿಂಗಳ ಚೆಲ್ಲಾಟ... ಬೀಸುತ್ತಿದ್ದ ಗಾಳಿಗೆ ಅವಳ ಸೆರಗು ಜೋರಾಗಿ ಹಾರಿ ಮತ್ತೆ ಅವಳಿಗೇ ಬಡಿದು ಅವಳ ದೇಹವನ್ನೇ ಆತುಕೊಳ್ಳುತ್ತಿತ್ತು... ಮಗುವೊಂದು ಓಡಿಬಂದು ಅಮ್ಮನನ್ನು ಅಪ್ಪಿ ಆನಂದಿಸುವಂತೆ... 'ಬಾ ಮತ್ತೆ ಸ್ವಲ್ಪ ಹೊತ್ತು ಇಲ್ಲಿ ಕೂರೋಣ' ಅಂದೆ. ಇಬ್ಬರೂ ಅಲ್ಲಿದ್ದ ಬೆಂಚಿನ ಮೇಲೆ ಕುಳಿತೆವು. ಸಮಯ ರಾತ್ರಿ 9ಕ್ಕೆ ಹತ್ತಿರವಾಗಿತ್ತು. ಸಂಜೆಯಿಂದ ಇದುವರೆಗೂ ನನಗೆ ಅವಳ ಬಾಯಿ ಬಿಡಿಸಲು ಆಗಿರಲೇ ಇಲ್ಲ. ಅಷ್ಟರಲ್ಲಿ ಬೈಕ್ ಸದ್ದು ಕೇಳಿಸಿತು. ಪ್ರಶಾಂತ ಬಂದಿದ್ದ. 'ಪ್ರಶ್ನಾ...' ಎಂದು ಕರೆಯುತ್ತಲೇ ಬೆಂಚಿನ ಮುಂದೆ ಬೈಕ್ ನಿಲ್ಲಿಸಿ ಅದರ ಮೇಲೇ